GATWU Garment and Textile Workers Union
ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್
Affiliated To New Trade Union Initiative-NTUI

ಆತ್ಮೀಯ ಕಾರ್ಮಿಕ ಸಂಗಾತಿಗಳೇ,

ನಿಮಗೆ ಗೊತ್ತಿರಲಿ, ಆರು ವರ್ಷಗಳ ಹಿಂದೆ ನಾವು ಏವರಿ ಡೆನಿಸನ್ ವರ್ಕರ್ಸ್ ಯೂನಿಯನ್ ಅಡಿಯಲ್ಲಿ ಸಂಘಟಿತರಾಗಿದ್ದೆವು. ಆ ಯೂನಿಯನ್ ಲೀಡರ್‌ಗಳು ಮಾಡಿಕೊಂಡ ಎರಡು ವೇತನ ಒಪ್ಪಂದಗಳು ಆಡಳಿತ ವರ್ಗದವರ ಹಿತಾಸಕ್ತಿಯನ್ನು ಕಾಯುತ್ತಿವೆ ಮತ್ತು ಈ ಒಪ್ಪಂದಗಳ ಮೂಲಕ ಕಾರ್ಮಿಕರನ್ನು ಆಡಳಿತವರ್ಗಕ್ಕೆ ಒತ್ತೆ ಇಡಲಾಗಿದೆ.

2016ರ ಒಪ್ಪಂದದಲ್ಲಿ ಪ್ರೊಡಕ್ಷನ್ ವಿಷಯಕ್ಕೆ ಸಂಬಂಧಪಟ್ಟಂತೆ ಹಲವಾರು ನಿಬಂಧನೆಗಳನ್ನು ವಿಧಿಸಿ ಕಾರ್ಮಿಕರಿಗೆ ಕಡಿಮೆ ವೇತನವನ್ನು ನಿಗದಿಗೊಳಿಸಲಾಗಿತ್ತು. ಇದರಲ್ಲಿ **D.A** ಅಂಶವೂ ಇರಲಿಲ್ಲ. ಕಡಿಮೆ ವೇತನ ನಿಗದಿಗೊಳಿಸಿದ್ದರಿಂದ ಪ್ರತಿ ತಿಂಗಳೂ 16 ಗಂಟೆಗಳ ಓ.ಟಿ ಕೊಟ್ಟು ನಮ್ಮ ತಿಂಗಳ ಆದಾಯ ಹೆಚ್ಚಿಸುವುದಾಗಿ ಆಡಳಿತವರ್ಗವು ಮೌಖಿಕವಾಗಿ ಒಪ್ಪಿಕೊಂಡಿತ್ತು. ಇದು ತಿಂಗಳಿಗೆ ಸುಮಾರು ರೂ. 3500 ರಿಂದ 4500 ರಷ್ಟು ಆಗುತ್ತಿತ್ತು. ಆಡಳಿತ ವರ್ಗದ ಮೌಖಿಕ ಭರವಸೆಯನ್ನು ಒಪ್ಪಂದದಲ್ಲಿ ಸೇರಿಸದೇ ಆ ಯೂನಿಯನ್ ತಾನು ಆಡಳಿತವರ್ಗದ ಕೈಗೊಂಬೆ ಎಂದು ಸಾಬೀತು ಪಡಿಸಿತ್ತು.

ಅಡಳಿತವರ್ಗವು ಕಾರ್ಮಿಕರಿಗೆ ಮಾಡುತ್ತಿದ್ದ ಅನ್ಯಾಯವನ್ನು ಮನಗಂಡು ನಾವೆಲ್ಲರೂ GATWU ನೇತೃತ್ವದಲ್ಲಿ ಸಂಘಟಿತರಾದೆವು. ಪ್ರತಿಕಾರವೆಂಬಂತೆ ಆಡಳಿತವರ್ಗವು ಮೌಖಿಕವಾಗಿ ಒಪ್ಪಿಕೊಂಡಿದ್ದ 16 ಗಂಟೆಗಳ OT ಯನ್ನು ನಿಲ್ಲಿಸಿ, ನಮ್ಮ ತಿಂಗಳ ಆದಾಯ ಕಡಿಮೆ ಮಾಡಿ ನಮಗೆ ಶಿಕ್ಷೆ ವಿಧಿಸಿತು. ಒಂದು ವೇಳೆ ಅಡಳಿತವರ್ಗದವರ ಮೌಖಿಕ ಭರವಸೆಯನ್ನು ಅಂದೇ ಒಪ್ಪಂದದಲ್ಲಿ ಸೇರಿಸಿದ್ದರೆ OT ಯನ್ನು ನಿಲ್ಲಿಸಲು ಆಗುತ್ತಿರಲಿಲ್ಲ. ಇಂದು ನಮಗೆ ಈ ಪರಿಸ್ಥಿತಿ ಬರಲು ಕಾರಣ,**ಆಡಳಿತವರ್ಗದ ಹಿತ ಕಾಯುತ್ತಿರುವ** ಕೆಲವು ಕಾರ್ಮಿಕರು.

ಪ್ರಸ್ತುತ **ಆಡಳಿತವರ್ಗದ ಹಿತ ಕಾಯುತ್ತಿರುವ** ಕೆಲವು ಕಾರ್ಮಿಕರು ಬೆಳಿಗ್ಗೆಯಿಂದ ಸಂಜೆಯವರೆಗೂ ಯಾವುದೇ ಕೆಲಸ ಮಾಡದೆ ಕಂಪನಿಯ ಎಲ್ಲಾ ವಿಭಾಗಗಳಿಗೆ ಹೋಗಿ ವದಂತಿಗಳನ್ನು ಹಬ್ಬಿಸುವಲ್ಲಿ ನಿರತರಾಗಿದ್ದರೂ ಆಡಳಿತವರ್ಗದವರು ಅವರನ್ನು ಪ್ರಶ್ನಿಸುತ್ತಿಲ್ಲ. ಆಡಳಿತವರ್ಗವೇ ಅವರನ್ನು ಛೂ ಬಿಟ್ಟು GATWU ಸಂಘಟನೆಯ ಸದಸ್ಯರನ್ನು ಒಡೆಯಲು ಶತಪ್ರಯತ್ನ ಮಾಡುತ್ತಿದ್ದಾರೆ.

GATWU ಸದಸ್ಯರು ಶೌಚಾಲಯಕ್ಕೆ ಹೋದರೆ ತಕ್ಷಣವೇ ವಿಭಾಗದ ಮುಖ್ಯಸ್ಥರು ಹುಡುಕಿಕೊಂಡು ಬಂದು ಪ್ರಶ್ನಿಸುತ್ತಾರೆ.ನಮ್ಮನ್ನು ಕಂಪನಿಯ ಒಳಗೆ ಖೈದಿಗಳಂತೆ ನಡೆಸಿಕೊಳ್ಳಲಾಗುತ್ತಿದೆ.

ಕಂಪನಿಯು ಕಳೆದ ಮೂರು ವರ್ಷಗಳಿಂದ ಸತತವಾಗಿ ಲಾಭದಲ್ಲಿರುವುದರಿಂದ ಕಾನೂನು ಪ್ರಕಾರವಾಗಿ ಕಾರ್ಮಿಕರಿಗೆ 20% ಬೋನಸ್ ನೀಡಬೇಕೆಂದು GATWU ಆಗ್ರಹಿಸಿತ್ತು. ಆದರೆ ಅದನ್ನೂ ಪರಿಗಣಿಸದೆ ಕಂಪನಿಯು ಏಕಪಕ್ಷೀಯವಾಗಿ ನಿರ್ಧಾರ ತೆಗೆದುಕೊಂಡು ಕಡಿಮೆ ಬೋನಸ್ ನೀಡಿದೆ.

P.T.C →

Scanned with OKEN Scanner

ಇದೆಲ್ಲದರ ಜೊತೆಗೆ ಕಾರ್ಮಿಕರಿಗೆ ಸಂಬಂಧಿಸಿದ ತೀರ್ಮಾನಗಳನ್ನು ತೆಗೆದುಕೊಳ್ಳಲು ಬಹುಸಂಖ್ಯಾತ ಸದಸ್ಯರಿರುವ GATWU ಜೊತೆ ಚರ್ಚಿಸಬೇಕೆಂದು ಪದೇ ಪದೇ ಕೇಳಿಕೊಳ್ಳುತ್ತಿದ್ದರೂ, ಆಡಳಿತವರ್ಗವು ಅದರ ಬಗ್ಗೆ ಗಮನವನ್ನೇ ಕೊಡದೆ ನಿರ್ಲಕ್ಷಿಸುತ್ತಿದ್ದಾರೆ. ಈ ಕೆಳಗಿನ ಬೇಡಿಕೆಗಳಾದ,

- 6 ವರ್ಷಗಳಿಂದಲೂ customary practice ಆಗಿ ಬಂದಿರುವ OTಯನ್ನು ಪುನಾರಂಭಿಸಬೇಕೆಂದು;
- 2017-2018ನೇ ಸಾಲಿನ ಉಳಿದ 8% ಬೋನಸ್ ಕೊಡಬೇಕೆಂದು;
- ಗುತ್ತಿಗೆ ಕಾರ್ಮಿಕರಿಗೂ ತಾರತಮ್ಯ ಮಾಡದೆ ಉಳಿದ 11.67% ಬೋನಸ್ ಅನ್ನು ಕೊಡಬೇಕೆಂದು;
- ಕಾರ್ಮಿಕರ ಮಧ್ಯೆ ತಾರತಮ್ಯ ಮಾಡಿಕೊಂಡು ಒಡಕುಂಟು ಮಾಡುವ ಪ್ರಯತ್ನವನ್ನು ನಿಲ್ಲಿಸಬೇಕೆಂದು;
- ಬಹುಸಂಖ್ಯಾತ ಸದಸ್ಯರಿರುವ GATWU ಜೊತೆ ಮಾತುಕತೆ ನಡೆಸಬೇಕೆಂಬ ಬೇಡಿಕೆಗಳನ್ನಿಟ್ಟು ದಿನಾಂಕ 22.10.2018 ರಂದು 1ನೇ ಶಿಫ್ಟ್‌ಯಿಂದ ಅನಿರ್ದಿಷ್ಟ ಕಾಲದವರೆಗೂ GATWU ಊಟ ಬಹಿಷ್ಕಾರ ಮಾಡಿ ಪ್ರತಿಭಟನೆಯನ್ನು ಮಾಡಲು ನಿರ್ಧರಿಸಿದೆ.

ಏನೇ ಬರಲಿ ಒಗಟ್ಟಿರಲಿ. ಎಲ್ಲಿಯವರೆಗೆ ಹೋರಾಟ, ಗೆಲ್ಲುವವರೆಗೆ ಹೋರಾಟ.

ನಾವು ಕಾರ್ಮಿಕರು ಆಡಳಿತ ವರ್ಗದ ಗುಲಾಮರಲ್ಲ. **GATWU** ಜಿಂದಾಬಾದ್.

Scanned with OKEN Scanner